**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**
**ಎಸ್.ಸಿ. ಸಂಃ 10042/2021**

ಪಿಡಬ್ಲೂ–15

ಸಿಡಬ್ಲೂ– 19

| | | |
|---|---|---|
| ಸಾಕ್ಷಿ ಹೆಸರು | – | ಮೂರ್ತಿ ಆರ್ ಬಿ |
| ತಂದೆ ಹೆಸರು | – | ರಾಮಪ್ಪ |
| ವಯಸ್ಸು | – | 43 ವರ್ಷ |
| ಉದ್ಯೋಗ | – | ಮುಖ್ಯ ಪೇದೆ , ಶಿರಾಳಕೊಪ್ಪ ಪೋಲೀಸ್ ಠಾಣೆ |
| ವಾಸಃ | – | ತೊಗರ್ಸಿ, ಶಿಕಾರಿಪುರ ತಾಲ್ಲೂಕು |

**ಪ್ರಮಾಣ ವಚನ ಭೋದಿಸಿದ ದಿನಾಂಕಃ 23–03–2026.**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ನಾನು 2018 ರಿಂದ 2024 ರ ವರೆಗೆ ಆನವಟ್ಟಿ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ18–05–2020 ರಂದು ಸಂಜೆ 7–00 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಪಿರ್ಯಾದುದಾರರಾದ ಚಾಸಾ–1 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಗುನ್ನ ನಂಃ73/2020 ಕಲಂ 341, 504,307 ಐ ಪಿ ಸಿ ರೀತ್ಯಾ ಪ್ರಕರಣ ದಾಖಲಿಸಿಕೊಂಡು ಪ್ರ.ವ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು

ಹಿರಿಯ ಅಧಿಕಾರಿಗಳಿಗೆ ನಿವೇಧಿಸಿಕೊಂಡಿರುತ್ತೇನೆ. ಈಗ ತೋರಿಸಿದ ನಿಪಿ –1 ಚಾಸಾ1 ರವರು ನೀಡಿದ ದೂರು ಆಗಿರುತ್ತದೆ. ಅದರಲ್ಲಿ ನನ್ನ ಸಹಿ ಇರುತ್ತದೆ. ನಿಪಿ –1 ರಲ್ಲಿ ಸಾಕ್ಷಿ ಬರೆದಿರುವ ಷರಾ ಮತ್ತು ಸಹಿಯನ್ನು ಒಟ್ಟಾಗಿ ನಿಪಿ –1(ಬಿ) ಎಂದು ಗುರುತಿಸಲಾಯಿತು. ಪ್ರ. ವ. ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ –18 ಎಂದು, ಸಾಕ್ಷಿಯ ಸಹಿಯನ್ನು ನಿಪಿ –18(ಎ) ಎಂದು ಗುರುತಿಸಲಾಯಿತು. ಪ್ರಕರಣದ ಮುಂದಿನ ತನಿಖೆಗಾಗಿ ಈ ಕೇಸಿನ ಕಡತವನ್ನು ಚಾಸಾ– 20 ರವರಿಗೆ ಹಸ್ತಾಂತರ ಮಾಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಹೆಚ್ ಎನ್ ಡಿ ವಕೀಲರಿಂದಃ**

ದಿನಾಂಕಃ 18–05–2022 ರಂದು ನಾನು ಠಾಣೆಯಲ್ಲಿ ಎಸ್ ಹೆಚ್ ಒ ಆಗಿದ್ದ ಬಗ್ಗೆ ಯಾವುದಾದರೂ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಾನು ಆ ದಿವಸ ಠಾಣಾ ಅಧಿಕಾರಿಯಾಗಿದ್ದಾಗ ಈ ಪ್ರಕರಣ ದಾಖಲಾಗುವ ಮುನ್ನ ಆಸ್ಪತ್ರೆಯಿಂದ ಹೆಚ್ ಎಂ ಆರ್ ಬಂದಿತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಾನು ಪ್ರಕರಣ ದಾಖಲು ಮಾಡಿದ ಮೇಲೆ ಆಸ್ಪತ್ರೆಯಿಂದ ಹೆಚ್ ಎಂ ಆರ್ ಬಂದಿರುತ್ತದೆ. ಹೆಚ್ ಎಂ ಆರ್ ಪೋಲೀಸ್ ಠಾಣೆಗೆ ಯಾವಾಗ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಹೆಚ್ ಎಂ ಆರ್ ನಾನು ಇದ್ದಾಗ ಬಂದಿರುವುದಿಲ್ಲ.

ಚಾಸಾ1 ರವರು ನಿಪಿ –1 ದೂರನ್ನು ಮೊದಲೇ ಬರೆದುಕೊಂಡು ಠಾಣೆಗೆ ತೆಗೆದುಕೊಂಡು ಬಂದಿದ್ದರು. ನಿಪಿ –1 ಯಾರ ಬರವಣಿಗೆಯಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಆ ದಿವಸ ನಾನು ಠಾಣೆಯ ಎಸ್ ಹೆಚ್ ಒ ಆಗಿರಲಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ ದಿವಸ ಚಾಸಾ1 ರವರಿಂದ ಯಾವುದೇ ದೂರನ್ನು ಸ್ವೀಕರಿಸಿರುವುದಿಲ್ಲ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).